**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ**

**ಓ.ಎಸ್ ನಂ. 285/2013.**

**ಚಾ.ಸಾ-1**

**ಸಾಕ್ಷಿಗೆ ದಿನಾಂಕ 24.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಪ್ರಭು ಕಂದಗಲ್ |
| ತಂದೆಯ ಹೆಸರು | ಃ ಮಲ್ಲಯ್ಯ |
| ವಯಸ್ಸು | ಃ 52 ವರ್ಷ |
| ಉದ್ಯೋಗ | ಃ ವಕೀಲ ವೃತ್ತಿ |
| ವಾಸಸ್ಥಳ | ಃ ಬಸವನ ಬಾಗೇವಾಡಿ |

**ಸಾಕ್ಷಿ ವಿಚಾರಣೆ ಃ-**

1. ನಾನು ನ್ಯಾಯಾಲಯದಿಂದ ಸಮನ್ಸ ಬಂದ ಮೇರೆಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ.

2. ನ್ಯಾಯಾಲಯದ ಆದೇಶದ ಮೇರೆಗೆ ವಾದಿ ಮತ್ತು ಪ್ರತಿವಾದಿಯರ ವಕೀಲರಿಗೆ ದಿಃ 15.06.2017 ರಂದು ನೋಟಿಸ ನೀಡಿರುತ್ತೇನೆ. ಸಾಕ್ಷಿ ನೋಟಿಸ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು, ವಾದಿ ಮತ್ತು ಪ್ರತಿವಾದಿಯರಿಗೆ ದಿಃ 16.06.2017 ರಂದು ನೋಟಿಸ ನೀಡಿರುತ್ತೇನೆ. ಸಾಕ್ಷಿ ನೋಟಿಸ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-2 ಎಂದು, ಅಂಚೆ ರಶೀದಿಗಳನ್ನು ನಿಸಿ-3 ರಿಂದ 5 ಎಂದು, ಅಂಚೆ ಸ್ವೀಕೃತಿಯನ್ನು ನಿಸಿ-6 ಮತ್ತು 7 ಎಂದು, ಅಂಚೆ ಲಕೋಟೆಯನ್ನು ನಿಸಿ-8 ಎಂದು ಗುರುತಿಸಲಾಯಿತು.

3. ದಿಃ 25.06.2017 ರಂದು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಯರು ಮತ್ತು ವಕೀಲರು ಹಾಜರಿದ್ದರು. ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿ ಮಹಜರನು ನೋಡಿ ಗುರುತಿಸಿದ್ದು ಅದನ್ನು ನಿಸಿ-9 ಎಂದು ಗುರುತಿಸಲಾಯಿತು. ನಂತರ ವರದಿ ಮತ್ತು ನಕಾಶೆಯನ್ನು

ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಸಾಕ್ಷಿ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-10 ಎಂದು, ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ವಾದಿ ಮತ್ತು ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**